**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS-233/2003** **DW-1**

**ದಿಃ 08.11.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಸ್ ಎಸ್ ಪಿ ವಕೀಲರಿಂದಃ**

3. ನನ್ನ ವಯಸ್ಸು ಈಗ 67 – 68 ಆಗಿರುತ್ತದೆ. 1 ನೇ ಪ್ರತಿವಾದಿಯು ನನ್ನ ಅಣ್ಣನಾಗಿರುತ್ತಾರೆ. ಅವರು ವಕೀಲರು ಇದ್ದರೆಂದರೆ ಸರಿ. ನಮ್ಮ ಮನೆತನದ ಎಲ್ಲಾ ಜವಾಬ್ದಾರಿಯನ್ನು ಅವರೇ ನಿರ್ವಹಿಸುತ್ತಿದ್ದರೆಂದರೆ ಸರಿ. ಅವರು ಹೇಳಿದಂತೆ ಎಲ್ಲರೂ ಸಹ ಕೇಳುತ್ತಿದ್ದೀರಿ ಎಂದರೆ ಸರಿ. ಉಣಕಲ್ಲ ಗ್ರಾಮದಲ್ಲಿ ಸರ್ವೆ ನಂಃ 627/3, 4 ಎಕರೆ 10 ಗುಂಟೆ ಹಾಗೂ ಸರ್ವೆ ನಂಃ 623/4 ಸಿ1, 2 ಎಕರೆ 1/2 ಗುಂಟೆ ಆಸ್ತಿಯು ತಮ್ಮ ಕುಟುಂಬಕ್ಕೆ ಸೇರಿರುತ್ತದೆಂದರೆ ಸರಿ. ಮೊದಲು ಈ ಆಸ್ತಿಗಳು ಹೊಲ ಇತ್ತು ಎಂದರೆ ಸಾಕ್ಷಿಯು ಮೊದಲು ಇತ್ತು ಹಾಗೂ ಈಗಲೂ ಸಹ ಅದೇ ರೀತಿ ಇರುತ್ತದೆ ಎನ್ನುತ್ತಾರೆ. ಈಗ ಈ ಆಸ್ತಿಗಳು ವ್ಯವಸಾಯ ಜಮೀನುಗಳಾಗಿ ಉಳಿದಿರುವದಿಲ್ಲ ಬದಲಿಗೆ ಎನ್ ಎ ಆಗಿ ಪ್ಲಾಟುಗಳಾಗಿರುತ್ತವೆಂದರೆ ಸರಿಯಲ್ಲ. ಈ ಮೊದಲು ತಾವು ತಮ್ಮ ಪರವಾಗಿ ವಾದ ಮಾಡಲು ಆರ್ ಪಿ ಹೊಸಮನಿ ಎಂಬ ವಕೀಲರನ್ನು ನೇಮಕ ಮಾಡಿದ್ದೀರಿ ಎಂದರೆ ಸಾಕ್ಷಿಯು ನಮ್ಮ ಅಣ್ಣನವರು ನೇಮಕ ಮಾಡಿದ್ದು ನನಗೆ ಗೊತ್ತಿರಲಿಲ್ಲ ಎನ್ನುತ್ತಾರೆ. ಸಾಕ್ಷಿಗೆ ಆರ್ ಪಿ ಎಚ್ ವಕೀಲರು ಸಲ್ಲಿಸಿದ ವಕಾಲತ್ತನ್ನು ತೋರಿಸಿ ಅದರಲ್ಲಿ ತಮ್ಮ ಸಹಿ ಇರುತ್ತದೆಂದರೆ ಸಾಕ್ಷಿಯು ಸದರಿ ದಾಖಲೆ ನೋಡಿ ಇಲ್ಲ ಎನ್ನುತ್ತಾರೆ. ತಾವು ಆರ್ ಪಿ ಎಚ್ ವಕೀಲರನ್ನು ತಮ್ಮ ಪರವಾಗಿ ವಾದ ಮಾಡಲು ಈ ವಕಾಲತ್ತನ್ನು ಸಹಿ ಮಾಡಿ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. 2003 ರಲ್ಲಿ ನಾವು ಅಸಲರ್ಜಿಗೆ ಕೈಪಿಯತ್ತನ್ನು ಹಾಕಿರುವದಿಲ್ಲ ನಮ್ಮ ಅಣ್ಣ ಮರಣ ಹೊಂದಿದ ನಂತರ ಕೈಪಿಯತ್ತನ್ನು ಹಾಕಲಾಗಿರುತ್ತದೆ. 1 ನೇ ಪ್ರತಿವಾದಿಯು ಹಾಕಿರುವ ಕೈಪಿಯತ್ತನ ವಿಚಾರಗಳು ತಮಗೆ ಮಾಹಿತಿ ಇರುತ್ತದೆಂದರೆ ಸಾಕ್ಷಿಯು ನನ್ನ ಅಣ್ಣ ಏನೆಲ್ಲಾ ಹಾಕಿರುತ್ತಾರೆಂಬ ಬಗ್ಗೆ ನನಗೆ ಯಾವದೇ ರೀತಿಯ ಮಾಹಿತಿ ಇಲ್ಲ ಎನ್ನುತ್ತಾರೆ. ತಾವು 1 ನೇ ಪ್ರತಿವಾದಿಯು ಸಲ್ಲಿಸಿದ ಕೈಪಿಯತ್ತನ್ನು ಅನುಮೋದಿಸಿ ಮೆಮೋವನ್ನು ಸಹ ಸಲ್ಲಿಸಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಅಣ್ಣ

ಇರುವವರೆಗೂ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ. ಆರ್ ಪಿ ಎಚ್ ವಕೀಲರು 1 ನೇ ಪ್ರತಿವಾದಿಯು ಸಲ್ಲಿಸಿದ ಕೈಪಿಯತ್ತನ್ನು ತಮ್ಮ ಪರವಾಗಿ ಅಳವಡಿಸಿಕೊಂಡ ಬಗ್ಗೆ ಸಲ್ಲಿಸಿರುವ ಮೆಮೋದ ವಿಚಾರಗಳು ತಮಗೆ ಗೊತ್ತಿದ್ದರೂ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗೆ ಸಂಬಂದಿಸಿದಂತೆ ಸಾಕಷ್ಟು ತಂಟೆ ತಕರಾರು ಮತ್ತು ಕೇಸುಗಳು ಇದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಯಾವದೇ ತಂಟೆ ತಕರಾರುಗಳಿಗೆ ಬಂದಿಲ್ಲ ಎಂದು ನುಡಿಯುತ್ತಾರೆ. ಸಾಕಷ್ಟ್ಯು ಕೇಸುಗಳು ಬಾಕೀ ಇದ್ದ ಕಾರಣ ಅವುಗಳ ಖರ್ಚು ವೆಚ್ಚಗಳು ಹೆಚ್ಚಾಗಗುತ್ತಿದ್ದ ಕಾರಣ ತಾವು ವಾದಿಯರಿಗೆ ನೋಡಿಕೊಳ್ಳಲು ಪರವಾನಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಯಾವದೇ ರೀತಿಯಾಗಿ ಕೊಟ್ಟಿಲ್ಲ ಹಾಗೂ ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಾವು ಈ ಹಿಂದಿನ ದಿನಾಂಕದಲ್ಲಿ ಸಲ್ಲಿಸಿದ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ತಮ್ಮ ವಕೀಲರು ತಯಾರು ಮಾಡಿದು ಅದಕ್ಕೆ ತಾವು ಸಹಿ ಮಾತ್ರ ಮಾಡಿರುತ್ತೀರಿ ಎಂದರೆ ಸ ಾಕ್ಷಿಯು ನಮ್ಮ ಅಣ್ಣ ತಮ್ಮಂದಿರೆಲ್ಲಾ ಸೇರಿ ಮಾಹಿತಿ ಕೊಟ್ಟದ್ದು ಅದರಂತೆ ನನ್ನ ವಕೀಲರು ಸಲ್ಲಿಸಿರುತ್ತಾರೆಂದು ನುಡಿಯುತ್ತಾರೆ. ದಾವಾ ಆಸ್ತಿಗಳನ್ನು ನೋಡಿಕೊಳ್ಳಲು ತಾವು ಈ ಹಿಂದೆ ವೈ ನರಸಿಂಹ ಎಂಬುವವರಿಗೆ ಒಟ್ಟುಮೊಕ್ತಿಯಾರ ಪತ್ರವನ್ನು ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. ಸದರಿ ವೈ ನರಸಿಂಹ ರವರು ಸರಿಯಾಗಿ ನಿರ್ವಹಿಸದ ಕಾರಣ ಅವರಿಗೆ ನೀಡಿದ ಮೊಕ್ತಿಯಾರ ಪತ್ರವನ್ನು ತಾವು ಮತ್ತು ತಮ್ಮ ಸಹೋದರರು ಸೇರಿ ರದ್ದು ಮಾಡಿ 1 ನೇ ವಾದಿಗೆ ಮತ್ತು ಜಗದೀಶ ಕಲ್ಯಾಣಶೆಟ್ಟಿ ಎಂಬುವವರಿಗೆ ಮೊಕ್ತಿಯಾರ ಪತ್ರವನ್ನು ತಾವು ಮತ್ತು ತಮ್ಮ ಸಹೋದರರು ನೀಡಿರುತ್ತೀರಿ ಎಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ನಮ್ಮಣ್ಣ ನೋಡಿಕೊಳ್ಳುತ್ತಿದ್ದರು ಎನ್ನುತ್ತಾರೆ. ನಿಪಿ 9 ನ್ನು ಸಾಕ್ಷಿಗೆ ತೋರಿಸಿ ಅವರ ಹೆಸರನ್ನು ಓದಿ ಹೇಳಿದಾಗ ಅದನ್ನು ತನ್ನ ಹೆಸರು ಎಂದು ಒಪ್ಪಿದ್ದು ಅದರಲ್ಲಿರುವ ಸಹಿಯು ತಮ್ಮದೆಂದರೆ ಸಾಕ್ಷಿಯು ನನ್ನದಲ್ಲ ಎಂದು ನುಡಿಯುತ್ತಾರೆ. ನಿಪಿ 9 ರಲ್ಲಿರುವ ಸಹಿ ತಮ್ಮದೇ ಆಗಿದ್ದರೂ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಅದೇ ರೀತಿಯಾಗಿ ನಿಪಿ 20 ಅಂದರೆ ಖರೀದಿ ಸಂಚಗಾರ ಪತ್ರದಲ್ಲಿ ತಮ್ಮ ಮತ್ತು ತಮ್ಮ ಸಹೋದರನ ಹೆಸರು ಇದ್ದು ಸಹಿಯನ್ನು ಸಹ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಅವರು ಮಾಡಿಕೊಟ್ಟಿರಬಹುದು ಎಂದು ನುಡಿಯುತ್ತಾರೆ. ನಿಪಿ 21 ರಲ್ಲಿಯೂ ಸಹ ತಮ್ಮ ಸಹಿ ಇರುತ್ತದೆಂದರೆ ಸಾಕ್ಷಿಯು ನನ್ನ ಅಣ್ಣ ಅದನ್ನೆಲ್ಲಾ ಮಾಡಿದ್ದು ಆತ ಹೇಳಿದ ಕಡೆ ನಾನು ಸಹಿ ಮಾಡಿರುತ್ತೇನೆಂದು ನುಡಿಯುತ್ತಾರೆ. ನಿಪಿ

22 ರಲ್ಲಿಯೂ ಸಹ ತಮ್ಮ ಸಹಿ ಇರುತ್ತದೆಂದರೆ ಸಾಕ್ಷಿಯು ಅದನ್ನು ಅವರು ಮಾಡಿ ಕೊಟ್ಟಿರಬಹುದು ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ : 18.02.1993 ರಂದು ತಾವು ಹಾಗೂ ತಮ್ಮ ಕುಟುಂಬದವರು ಸೇರಿ ನೋಟರಿ ಮುಂದೆ ಪಾವರ ಆಫ್ ಅಟಾರ್ನಿಯನ್ನು ಬರೆದುಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾನು ಎಲ್ಲಿಗೂ ಹೋಗಿಲ್ಲ ಮನೆಯಲ್ಲಿ ಅವರು ಹೇಳಿದ ರೀತಿ ಕೇಳುತ್ತಿದ್ದೆವು ಎನ್ನುತ್ತಾರೆ. ತಾವು ನೋಟರಿ ಮುಂದೆ ಸಹಿ ಮಾಡಿದ್ದರೂ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಹಾಗೂ ತಮ್ಮ ಸಹೋದರರು ಸೇರಿ 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟಿಟ ರವರಿಗ ಖರೀದಿ ಸಂಚಗರ ಪತ್ರವನ್ನು ಮಾಡಿಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನ್ನ ಅಣ್ಣನವರು ಮನೆಯಲ್ಲಿ ಹೇಳಿದ ರೀತಿ ಕೇಳುತ್ತಿದ್ದು ಎಲ್ಲಿಗೂ ಹೋಗಿಲ್ಲ ಎಂದು ನುಡಿಯುತ್ತಾರೆ. ತಾವು 1 ನೇ ವಾದಿಗೆ ಮತ್ತು ಕಲ್ಯಾಣ ಶೆಟ್ಟಿ ರವರಿಗೆ ಆಸ್ತಿಯನ್ನು ಮಾರಾಟ ಮಾಡುವದಾಗಿ ಹೇಳಿ ಖರೀದಿ ಸಂಚಗಾರ ಪತ್ರಗಳ ಸಮಯದಲ್ಲಿ ತಲಾ 5 ಸಾವಿರ ರೂ ಗಳನ್ನು ಪಡೆದಿರುತ್ತೀರಿ ಎಂದರೆ ಸರಿಯಲ್ಲ. ತಮಗೆ ಎಲ್ಲ ವಿಚಾರ ಗೊತ್ತಿದ್ದರೂ ಈಗ ಉದ್ದೇಶಪೂರ್ವಕವಾಗಿ ವಾದಿಯರಿಗೆ ತೊಂದರೆ ಕೊಡಲು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಎರಡು ಆಸ್ತಿಗಳನ್ನು ಇವರಿಗೆ ಒಟ್ಟು ಮೊತ್ತ ರೂ.8,67,468.50 ಗಳಿಗೆ ಮಾರಾಟ ಮಾಡಲು ಒಪ್ಪಿರುತಿತೀರಿ ಎಂದರೆ ಸಾಕ್ಷಿಯು ನಮ್ಮ ಅಣ್ಣನವರು ಮಾಡಿಕೊಟ್ಟಿರಬಹುದು ನಾವು ಎಲ್ಲಿಗೂ ಮತ್ತು ತಮಗೇನೂ ಗೊತ್ತಿಲ್ಲ ಎನ್ನುತ್ತಾರೆ. ತಾವು ದಾವಾ ಅಸ್ತಿಗಳನ್ನು ಮೇಲೆ ತಿಳಿಸಿದ ಮೊತ್ತಕ್ಕೆ ಮಾರಾಟ ಮಾಡಲು ಒಪ್ಪಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಅಣ್ಣನವರು ಏನೆಲ್ಲಾ ಮಾಡಿರುತ್ತಾರೆಂಬುದು ಗೊತ್ತಿಲ್ಲ ಎಂದು ಹಾಗೂ ತಾನು ಒಪ್ಪಿಲ್ಲ ಎಂದು ನುಡಿಯುತ್ತಾರೆ. ತಾವು ಈಗಾಗಲೇ 1 ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರಿಂದ ಹಣವನ್ನುಪಡೆದಿದ್ದರೂ ಈಗ ಉದ್ದೇಶಪೂರ್ವಕವಾಗಿ ಏನೂ ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ವೈ ನರಸಿಂಹ ರವರರಿಗೆ ನೀಡಿದ ಮೊಕ್ತಿಯಾರ ಪತ್ರ ರದ್ದು ಮಾಡಿ 1 ನೇ ವಾದಿಗೆ ಮೊಕ್ತಿಯಾರ ಪತ್ರ ಬರಕೊಟ್ಟು ಅವರಿಗೆ ಆಸ್ತಿಯನ್ನು ಮಾರಾಟ ಮಾಡಲು ಒಪ್ಪಿದ ಕಾರಣ ಅವರೇ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಸಂಬಂದಪಟ್ಟ ಟ್ಯಾಕ್ಸನ್ನು ತುಂಬುತ್ತಿದ್ದಾರೆಂದರೆ ಸಾಕ್ಷಿಯು ನಾವು ಯಾವದೇ ಪತ್ರ ಮಾಡಿಕೊಟ್ಟಿಲ್ಲ ಮತ್ತು ಅವರ ಮುಖವನ್ನು ಸಹ ನೋಡಿಲ್ಲ ಎನ್ನುತ್ತಾರೆ. ತಾವು 20 ವರ್ಷಗಳ ಹಿಂದೆ ಇವರಿಗೆ ಖರೀದಿ ಸಂಚಗಾರ ಪತ್ರವನ್ನು ಮಾಡಿಕೊಟ್ಟಿದ್ದರೂ ಈಗ ತಮಗೆ ನೆನಪಿರದ ಕಾರಣ ಅವರ ಮುಖ ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

5. ನಾನು ನನ್ನ ಅಣ್ಣನ ಬಳಿ ದಾವಾ ಆಸ್ತಿಗೆ ಸಂಬಂದಿಸಿದಂತೆ ಏನೆಲ್ಲಾಗುತ್ತಿದ್ದ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಎಂದಿಗೂ ಮಾಡಿರುವದಿಲ್ಲ. 1 ನೇ ಪ್ರತಿವಾದಿಯು ಅವಿವಾಹಿತರಾಗಿ ಮರಣ ಹೊಂದಿರುತ್ತಾರೆಂದರೆ ಸರಿ. 1 ನೇ ಪ್ರತಿವಾದಿಯು ಯಾವದೇ ವ್ಯವಹಾರವನ್ನು ಮಾಡಬೇಕಾದರೆ ತಮಗೆ ಮತ್ತು 3 ರಿಂದ 6 ನೇ ಪ್ರತಿವಾದಿಯರಿಗೆ ಕೇಳಿ ಮಾಡುತ್ತಿದ್ದರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಬದುಕಿದ್ದಾಗ ಅವರ ಮಾತನ್ನು ಕೇಳುತ್ತಿದ್ದು ಅವರ ಮರಣದ ನಂತರ ಯಾರ ಮಾತನ್ನು ಕೇಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. 7 ನೇ ಪ್ರತಿವಾದಿಯು ತಮ್ಮ ತಾಯಿ ಎಂದರೆ ಸರಿ. 1 ನೇ ಪ್ರತಿವಾದಿಯ ಅವಿವಾಹಿತರಾಗಿದ್ದ ಕಾರಣಅ ಅವರು ತ್ಮ ಮತ್ತು ಇತರ ಸಹೋದರರ ಒಳ್ಳೇಯದಕ್ಕಾಗಿ ದಾವಾ ಅಸ್ತಿಗೆ ಸಂಬಂದಿಸಿದಂತೆ ವ್ಯವಹಾರ ಮಾಡುತ್ತಿದ್ದರೇಂದರೆ ಸಾಕ್ಷಿಯು ಮದುವೆ ಆಗದಿರುವದಕ್ಕೂ ವ್ಯವಹಾರ ಮಾಡುವದಕ್ಕೂ ಏನು ಸಂಬಂದ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯು ಜೀವಿತಾವದಿಯಲ್ಲಿ ಒಟ್ಟು ಕುಟುಂಬದ ಒಳಿತಿಗಾಗಿ ನಿರ್ದಾರಗಳನ್ನು ತೆಗೆದುಕೊಳ್ಳುತ್ತಿದ್ದರೆಂದರೆ ಸಾಕ್ಷಿಯು ತಮ್ಮ ತಾಯಿಯು ಬದುಕಿದ್ದ ಸಮಯದವರೆಗೂ ಅವರ ಮಾತ್ತನ್ನು ಕೇಳುತ್ತಿದ್ದ ನಂತರ ಯಾರ ಮಾತು ಕೇಳುತ್ತಿರಲಿಲ್ಲ ಎಂದು ನುಡಿಯುತ್ತಾರೆ. ತಮ್ಮ ಕುಟುಂಬದಲ್ಲಸಿ ಹಣಕಾಸಿನ ತೊಂದರೆ ಇದ್ದ ಕಾರಣ ತಾವೆಲ್ಲರೂ ಸೇರಿ 1 ನೇ ವಾದಿಗೆ ದಾವಾ ಆಸ್ತಿಗಳಿಗೆ ಸಂಬಂದದಿಸಿದಂತೆ ಕೋರ್ಟ ಕಚೇರಿ ಓಡಾಡಲು ಮತ್ತು ಸರಕಾರಕ್ಕೆ ಕರ ತುಂಬಲು ಹೇಳಿ ಮೊಕ್ತಿಯಾರ ಪತ್ರವನ್ನು ಬರೆದುಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನಾವೆಲ್ಲಾ ದುಡಿದು 1 ನೇ ಪ್ರತಿವಾದಿಗೆ ನೀಡುತ್ತಿದ್ದು ಆತ ಏನು ಮಾಡುತ್ತಿದ್ದರೆಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಾವು ಈ ಹಿಂದೆ ದಾವಾ ಆಸ್ತಿಯನ್ನು ಮಾರಾಟ ಮಾಡುವದಾಗಿ ಹೇಳಿ ಅದ್ಯಾಪಕನಗರ ಸಂಘಕ್ಕೂ ಸಹ ಪತ್ರ ಬರೆದುಕೊಟ್ಟಿರುತ್ತೀರಿ ಎಂದರೆ ಸಾಕಿಷ್ಷಿಯು ನಾನು ಸಣ್ಣವನಾಗಿದ್ದು 1 ನೇ ಪ್ರತಿವಾದಿಯ ಎಲ್ಲ ವ್ಯವಹಾರ ವಾುಡತ್ತಿದ್ದು ಆತ ಏಒನೆಲ್ಲಾ ಮಾಡುತ್ತಿದ್ದ ಎಂದು ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಮಗೆ ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಎಲ್ಲಾ ವ್ಯವಹಾರಗಳ ಬಗ್ಗೆ ಮಾಹಿತಿ ಇದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ಅದ್ಯಾಪಕನಗರ ಸಂಘ ಮತ್ತು ತಮ್ಮ ನಡುವೆ ಪ್ರಕರಣ ದಾಖಲಾಗಿತ್ತು ಎಂದರೇ ಸಾಕ್ಷಿಯು ಇದೇ ಮೊದಲು ಬಾರಿಗೆ ನ್ಯಾಯಾಲಯಕ್ಕೆ ಬರುತ್ತಿದ್ದು ತನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಯಾವಗೆಲ್ಲಾ ಹಣಕಾಸಿನ ತೊಂದರೆ ಇರುತ್ತದೆಯೋ ಆಗ ಕೋರ್ಟ ಕಚೇರಿ ಸುತ್ತಾಗಲಿ ತಗಲುವ ವೆಚ್ಚವನ್ನು ಭರಿಸಲು 1 ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರು ಹಣವನ್ನು ಕೊಡುತ್ತಿದ್ದರೇಂರದೆರ ಸಾಕ್ಷಿಯ ನ ಾ ನುಮತುತ ನನ್ನ

ಸಹೋದರರು ದುಡಿದು 1ನೇ ಪ್ರತಿವಾದಿಗೆ ನಿನೀಡುತ್ತಿದ್ದು ಆತ ಅದರಿಂದ ಎಲ್ಲಾ ವ್ಯವಹಾರವನ್ನು ಮಾಡಿರುತ್ತಾರೆಂದು ನುಡಿಯುತ್ತಾರೆ. ತಾವು ಯಾವ ರೀತಿಯಾಗಿ ಹಣವನ್ನು ದುಡಿದು 1ನೇ ಪ್ರತಿವಾದಿಗೇ ನೀಡಿರಲಪಿಲ್ಲ ಎಂದರೆ ಸರಿಯಲ್ಲ. 1ನೇ ವಾದಿ ಮತ್ತು ಕಲ್ಯಾಣ ಶೆಟ್ಟಿ ಯಾವಾಗೆಲ್ಲ ಹಣ ಬೇಕೋ ಆ ಸಮಯದಲ್ಲಿ ತಮಗೆ ಹಣ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನನಗೇನೂ ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ದಿನಾಂಕ : 17.06.1994 ರಂದು 25 ಸಾವಿರ ರೂ ಗಳನ್ನು, ದಿನಾಂಕ : 25.10.1994 ರಂದು 20 ಸಾವಿರ ರೂ ಗಳನ್ನು 1ನೇ ವಾದಿ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಹಣವನ್ನು ಅವರು ಕೊಟ್ಟಿರುತ್ತಾರೋ ಅಥವಾ 1ನೇ ಪ್ರತಿವಾದಿ ಕೊಟ್ಟಿರುತ್ತಾರೋ ತಮಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿನಾಂಕ : 14.11.1994 ರಂದು ಪುನಃ ವಾದಿಯರಿಂದ ಹಣವನ್ನು ಪಡೆದಿರುತ್ತೀರಿ ಎಂದರೆ ಸಾಕ್ಷಿಯು ನಾನು ಹೋಗಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 23 ರಿಂದ 25 ರ ದಾಖಲೆ ತೋರಿಸಿ 1ನೇ ಪ್ರತಿವಾದಿಯ ಹಣ ಪಡೆದ ಬಗ್ಗೆ ಬರಕೊಟ್ಟ ರಶೀದಿ ಎಂದರೆ ಸ ಾಕ್ಷಿಯು ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಾವು ಹಣವನ್ನು ಪಡೆದಿದ್ದರೂ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1ನೇ ವಾದಿಯು ತಮಗೆ 80 ಸಾವಿರಕ್ಕಿಂತ ಮೇಲ್ಪಟ್ಟು ಹಣವನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಹಾಗೂ ತಾವು ಎಲ್ಲಿಗೂ ಹೋಗಿಲ್ಲ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಮರಣ ಹೊಂದಿರುವ ಕಾರಣ ತಮಗೆಲ್ಲಾ ಮಾಹಿತಿ ಇದ್ದರೂ ಸಹ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನನಗೆ ಓದಲು ಬರದ ಕಾರಣ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನೆಲ್ಲಾ ಬರೆದಿದೆ ಎಂಬುದು ನನಗೇನೂ ಗೊತ್ತಿಲ್ಲ ಆದರೆ ನಾನು ಮತ್ತು ನನ್ನ ಸಹೋದರರು ಹೇಳಿದ ಮಾಹಿತಿಯಂತೆ ನನ್ನ ವಕೀಲರು ಅದನ್ನು ಹಾಕಿರುತ್ತಾರೆ. 3 ರಿಂದ 6ನೇ ಪ್ರತಿವಾದಿಯರು ಮಾಹಿತಿಯನ್ನು ಕೊಟ್ಟಿರುತ್ತಾರೆ. 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿರವರು ಮೋಸದಿಂದ ಜಿಪಿಎ ಮಾಡಿಕೊಂಡಿರುತ್ತಾರೆಂದು ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿದ್ದು ಯಾವದಾದರೂ ಕ್ರಮ ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ತಮಗೆ ಈಗ ವಿಚಾರ ಗೊತ್ತಾಗಿದ್ದು ಮುಂದೆ ಕ್ರಮ ತೆಗೆದುಕೊಳ್ಳುತ್ತೇವೆಂದು ನುಡಿಯುತ್ತಾರೆ. ತಮ್ಮ ಪ್ರಮಾಣ ಪತ್ರದಲ್ಲಿ ತಮಗೆ ಈಗ ಮಾಹಿತಿ ಸಿಕ್ಕಿದೆ ಎಂದು ಹೇಳಿ ಎಲ್ಲಿಯೂ ಸಹ ಉಲ್ಲೇಖಿಸಿಲ್ಲ ಎಂದರೆ ಸರಿ. ಖಾಲಿ ಬಾಂಡ ಪೇಪರನಲ್ಲಿ ಸಹಿ ಮಾಡಿಸಿಕೊಂಡಿರುತ್ತಾರೆಂದು ತಿಳಿಸಿದ್ದುಯಾರು ಮಾಡಿಸಿಕೊಂಡಿರುತ್ತಾರೆಂದರೆ ಸಾಕ್ಷಿಯು ವ್ಯವಹಾರ ಮಾಡಿದವರು ಮಾಡಿಸಿಕೊಂಡಿದ್ದು ಅವರ ಹೆಸರು ಗೊತ್ತಿಲ್ಲ ಎನ್ನುತ್ತಾರೆ. ತಾವು ಖಾಲಿ ಬಾಂಡ ಪೇಪರನಲ್ಲಿ ಸಹಿ

ಮಾಡಿಸಿಕೊಂಡಿರುತ್ತಾರೆಂದು ತಮ್ಮ ಪ್ರಮಾಣ ಪತ್ರದಲ್ಲಿ ತಿಳಿಸಿರುವದು ಸುಳ್ಳಿನಿಂದ ಕೂಡಿರುತ್ತದೆಂದರೆ ಸರಿಯಲ್ಲ. ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ರಶೀದಿಯಲ್ಲಿ ಸಹಿ ಮಾಡಿದ ಬಗ್ಗೆ ಉಲೇಖಿಸಿರುತ್ತೀರಿ ಎಂದರೆ ಸರಿ. ಹಣವನ್ನು ಪಡೆದಿದ್ದು ಹಣಕಾಸಿನ ವ್ಯವಹಾರ ಆಗದೇ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ಆಗಿತ್ತು ಎಂದರೆ ಸಾಕ್ಷಿಯು ನಾವು ಯಾವದೇ ಹಣವನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರು ಒಟ್ಟುಮೊಕ್ತಿಯಾರ ಪತ್ರ ಮಾಡಿಕೊಟ್ಟ ದಿನಾಂಕದಿಂದ ಇಲ್ಲಿಯವರೆಗೂ ದಾವಾ ಆಸ್ತಿಗಳನ್ನು ಅವರೇ ನಿರ್ವಹಿಸಿಕೊಂಡು ಬಂದಿರುತ್ತಾರೆಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಯಾರು ನೋಡಿಕೊಂಡಿರುತ್ತಾರೆಂದು ಪುನಃ ಪ್ರಶ್ನಿಸುತ್ತಾರೆ. ತಾವು , 3 ರಿಂದ 6ನೇ ಪ್ರತಿವಾದಿಯರು ಹಾಗೂ 1ನೇ ಪ್ರತಿವಾದಿ ಬರಕೊಟ್ಟ ಖರೀದಿ ಸಂಚಗಾರ ಪತ್ರದಲ್ಲಿನ ಶರತ್ತುಗಳನ್ನು ಓದಿರುತ್ತೀರಾ ಎಂದರೆ ಸಾಕ್ಷಿಯು ನನಗೆ ಓದಲು ಬರುವದಿಲ್ಲ ಎಂದು ಹಾಗೂ 1ನೇ ಪ್ರತಿವಾದಿಯು ತಮಗೆ ಯಾವದೇ ಮಾಹಿತಿ ನೀಡದ ಕಾರಣ ಅದರಲ್ಲಿ ಏನಿದೆ ಎಂಬುದು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಮಗೆ ಎರಡು ಸಂಚಗಾರ ಪತ್ರಗಳ ಬಗ್ಗೆ ಮಾಹಿತಿ ಇದ್ದರೂ ಸಹ ಈಗ ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಮಗೆ ಇದೇ ರೀತಿಯಾಗಿ ಸಾಕ್ಷಿ ನುಡಿಯಬೇಕೆಂದು ಯಾರು ಹೇಳಿ ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಇದ್ದ ವಿಚಾರವನ್ನು ಹೇಳುತ್ತಿದ್ದೇನೆಂದು ನುಡಿಯುತ್ತಾರೆ. ತಾವು ಹಾಗೂ ಇತರೆ ಸಹೋದರರು ಗೌ ಸರ್ವೋಚ್ಚ ನ್ಯಾಯಾಲಯದಲ್ಲ ಪ್ರಕರಣ ಆದ ನಂತರ ಮಾಹಿತಿ ಕೊಡುತ್ತೇನೆಂದು 1ನೇ ವಾದಿ ಮತುತ ಕಲಾಣ ಶೆಟ್ಟಿರವರಿಗೆ ತಿಳಿಸಿದ್ದೀರಿ ಎಂದರೆ ಸಾಕ್ಷಿಯು ನನಗೆ ಇದರ ಬವಗ್ಗೆ ಏನೂ ಗೊತ್ತಿಲ್ಲ ಎನ್ನುತ್ತಾರೆ. ತಾವು ಮತ್ತು ತಮ್ಮ ಸಹೋದರರು ಪ್ರಕರಣ ತೀರ್ಮಾನವಾದ ನಂತರ 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರು ಆಸ್ತಿಯನ್ನು ಮಾರಾಟ ಮಾಡುವದಾಗಿ ಒಪ್ಪಿಕೊಂಡಿರುತ್ತೀರಿ ಎಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ಎನ್ನುತ್ತಾರೆ. 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರು ತಮ್ಮ ಬಳಿ ಆಗಾಗ ಬಂದು ಪ್ರಕರಣದ ಬಗ್ಗೆ ವಿಚಾರಿಸುತ್ತಾ ಖರೀದಿ ಪತ್ರವನ್ನು ಬರೆದುಕೊಡುವಂತೆ ಕೇಳುತ್ತಿದ್ದಇರೆಂದರೆ ಸಾಕ್ಷಿಯು ನಮ್ಮ ಬಳಿ ಯಾರೂ ಬಂದಿಲ್ಲ ಎನ್ನುತ್ತಾರೆ. ಅವರು ಬಂದು ವಿಚಾರಿಸಿದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೇ ಸಾಕ್ಷಿಯು ಇದುವರೆಗೂ ನಾನು ಅವರ ಮುಖವನ್ನು ನೋಡಿಲ್ಲ ಎಂದು ನುಡಿಯುತ್ತಾರೆ. ವಾದಿಯರು ತಮ್ಮ ಬಳಿ ಬಂದಿದ್ದರೂ ಸಹ ಹಾಗೂ ಸಾಕಷ್ಟು ಬಾರಿ ವಿನಂತಿಸಿಕೊಂಡಿದ್ದರೂ ತಾವು ಅವರನ್ನು ನಿರ್ಲಕ್ಷಿಸಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವಾಗಲಿ ಅಥವಾ ತಮ್ಮ ಸಹೋದರರಾಗಲಿ 1ನೇ ವಾದಿ ಮತ್ತು ಜಗದೀಶ ಕಲ್ಯಾಣಶೆಟ್ಟಿ ರವರಿಗೆ ಬರೆದುಕೊಟ್ಟ

ಒಟ್ಟುಮೊಕ್ತಿಯಾರ ಪತ್ರವನ್ನು ಇಲ್ಲಿಯವರೆಗೂ ರದ್ದುಗೊಳಿಸಿಲ್ಲ ಎಂದರೆ ಸಾಕ್ಷಿಯು ನನಗೆ ಯಾವದೇ ವಿಚಾರ ಗೊತ್ತಿಲ್ಲ ಹಾಗೂ ನಮ್ಮ ಅಣ್ಣ ಹೇಳಿದ ಕಡೆಗೆ ಸಹಿ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ಒಟ್ಟುಮೊಕ್ತಿಯಾರ ಪತ್ರವು ಇಲ್ಲಿಯವರೆಗೂ ರದ್ದು ಆಗಿಲ್ಲ ಎಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಮಗೆ ಒಟ್ಟುಮೊಕ್ತಿಯಾರ ಪತ್ರ ಚಾಲ್ತಿಯಲ್ಲಿರುವ ವಿಚಾರ ಗೊತ್ತಿದ್ದರೂ ಈಗ ಸುಳ್ಳು ಹೇಳುತ್ತಿ ದ್ದೀರಿ ಎಂದರೆ ಸರಿಯಲ್ಲ. ತಾವು ವಾದಿಯರ ಕೋರಿಕೆ ನಿರ್ಲಕ್ಷಿಸಿದ ಕಾರಣ ದಿ : 10.01.2001 ರಂದು ತಮಗೆ ನೋಟೀಸನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ನೋಟೀಸು ಕೊಟ್ಟಿದು ಅದನ್ನು ನನ್ನ ಅಣ್ಣ ಬಳಿ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ಆ ನೋಟೀಸನಲ್ಲಿ ಎನೆಲ್ಲಾ ಬರೆದಿದೆ ಎಂಬುದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ತಮಗೆ ನೋಟೀಸು ನೀಡಿದ ವಿಚಾರಗಳನ್ನು ತಿಳಿಸಿದ್ದರೂ ಈಗ 1 ನೇ ಪ್ರತಿವಾದಿ ಮರಣ ಹೊಂದಿರುವ ಕಾರಣ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು ಹಿರಿಯ ವಕೀಲರಾದ ಎಸ್ ಎಂ ಲಕ್ಮ್ಮೇಶ್ವರ ರವರ ಕಡೆಯಿಂದ ಸದರಿ ನೋಟೀಸಗೆ ಉತ್ತರ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ನನಗೇನೂ ಗೊತ್ತಿಲ್ಲ ಮತ್ತು ನಾನು ಹೋಗಿಲ್ಲ ಎನ್ನುತ್ತಾರೆ. ಆ ಮರು ಉತ್ತರ ನೋಟೀಸನಲ್ಲಿ ಹಣವನ್ನು ಪಡೆದ ಬಗ್ಗೆ ಒಪ್ಪಿರುತ್ತೀರಿ ಎಂದರೆ ಸಾಕ್ಷಿಯು ತಾವು ಒಪ್ಪಿಕೊಂಡಿಲ್ಲ ಮತ್ತು ಹಣವನ್ನು ಪಡೆದಿಲ್ಲ ಎಂದು ನುಡಿಯುತ್ತಾರೆ. ತಮಗೆ ಎಲ್ಲಾ ವಿಚಾರ ಗೊತ್ತಿದ್ದರೂ ವಾದಿಯರಿಗೇ ಮೋಸ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 17.02.2003 ರಂದು ವಾದಿಯರು ಪತ್ರಿಕಾ ಪ್ರಕಟಣೆಯಲ್ಲಿ ನೋಟೀಸನ್ನು ಕೊಟ್ಟಿರುತ್ತಾರೆಂದರೆ ಸಾಕ್ಷಿಯು ಯಾವ ನೋಟೀಸು ಬಂದಿಲ್ಲ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಎಲ್ಲಾ ವಿಚಾರ ಗೊತ್ತಿದ್ದರೂ ನೋಟೀಸಗೆ ಉತ್ತರವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪತ್ರಿಕಾ ಪ್ರಕಟಣೇ ನೀಡಿದ ನಂತರ ವಾದಿಯರು ತಮ್ಮ ಬಳಿ ಬಂದು ಖರೀದಿ ಪತ್ರವನ್ನು ಮಾಡಿಕೊಡುವಂತೆ ವಿನಂತಿಸಿ ಕೊಂಡಿರುತ್ತಾರೆಂದರೆ ಸಾಕ್ಷಿಯು ನನ್ನ ಅಣ್ಣನ ಬಳಿ ಹೋಗಿರಬಹುದು ನನ್ನ ಬಳಿ ಯಾರೂ ಬಂದಿಲ್ಲ ಎಂದು ನುಡಿಯುತ್ತಾರೆ. ತಾವು ಆ ಸಮಯದಲ್ಲಿ ಕೇಸು ಮುಗಿಯಲು ನಂತರ ಮಾಡಿಕೊಡುತ್ತೇವೆಂದು ಒಪ್ಪಿರುತ್ತೀರಿ ಎಂದರೇ ಸಾಕ್ಷಿಯು ತಾವೇನೂ ಆ ರೀತಿ ಒಪ್ಪಿಲ್ಲ ಎಂದು ನುಡಿಯುತ್ತಾರೆ. ದಿಃ 19.01.2001 ರಂದು ನೀಡಿದ ಮೊದಲ ನೋಟೀಸನಲ್ಲಿ ತಾವು ಆಸ್ತಿಯನ್ನು ಬೇರೆಯವರರಿಗೆ ಮಾರಾಟ ಮಾಡಿರುತ್ತೀರಿ ಎಂದು ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ಯಾವ ನೋಟೀಸು ಕೊಟ್ಟಿಲ್ಲ ಮತ್ತು ಈ ರೀತಿ ಹೇಳಿಲ್ಲ ಎಂದು ನುಡಿಯುತ್ತಾರೆ. ಆ ನೋಟೀಸನಲ್ಲಿ ತಾವು ಈ ಹಿಂದೆ ನಡೆದ ವ್ಯವಹಾರವನ್ನು ಮುಚ್ಚಿ ಕೇವಲ ಬೇರೆಯವರಿಗೆ ಮಾರಾಟ

ಮಾಡಿರುತ್ತೀರಿ ಎಂದು ತಿಳಿಸಿರುತ್ತೀರಿ ಎಂದರೆ ಸಾಕ್ಷಿಯು ತಾವು ಯಾರಿಗೂ ಸಹ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ದಿ : 15.05.2001 ರಲ್ಲಿ ಜಗದೀಶ ಕಲ್ಯಾಣಶೆಟ್ಟಿರವರು ಮರಣ ಹೊಂದಿದ ನಂತರ ವಾದಿಯರು ಪುನಃ ಬಂದು ತಮ್ಮ ಬಳಿ ಕೇಳಿರುತ್ತಾರೆಂದರೆ ಸಾಕ್ಷಿಯು ಕೇಳಿಲ್ಲ ಎಂದು ನುಡಿಯುತ್ತಾರೆ. ದಿ 23.07.2003 ರಂದು ದಾವಾ ಆಸಿಗಳನ್ನು ಮಾರಾಟ ಮಾಡಿರುತ್ತೀರಿ ಎಂದು ವಾದಿಯರಿಗೆ ಗೊತ್ತಾಗಿರುತ್ತದೆಂದರೆ ಸಾಕ್ಷಿಯು ತಾವು ಯಾರಿಗೂ ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೇ. ತಾವು ದಾವಾ ಆಸ್ತಿಗಳನ್ನು ಪ್ರತಿವಾದಿ ನಂಃ 10 ರಿಂದ 13 ರವರಿಗೆ ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ತಾವು ಮಾಡಿಲ್ಲ ಎಂದು ನುಡಿಯುತ್ತಾರೆ. ತಾವು ಹಿರಿಯು ವಕೀಲರಾದ ಶ್ರೀ ಸಿ ವಿ ಆರ್ ರವರಿಗೆ ಒಟ್ಟು ಮೊಕ್ತಿಯಾರ ಪತ್ರವನ್ನು ಬರೆದುಕೊಟ್ಟು ಅವರ ಮುಖಾಂತರ 10 ರಿಂದ 13 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ನಾವು ಎಲ್ಲಿಗೂ ಹೋಗಿಲ್ಲ ಹಾಗೂ ಏನೂ ಮಾಡಿಕೊಟ್ಟಿಲ್ಲ ಎಂದು ನುಡಿಯುತ್ತಾರೆ. ತಾವು ಆಸ್ತಿಂದುನ್ನು ಈಗಾಗಲೇ ಮಾರಾಟ ಮಾಡಿದ್ದರೂ ಈಗ ಮಾರಾಟ ಮಾಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಿನಾಂಕ : 22.07.2000 ಮತ್ತು 21.07.2000 ರಂದು ಹಾಗೂ ದಿ : 20.07.2000 ರಂದು ಆಸ್ತಿಗಳನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಯಾವದೇ ಆಸ್ತಿಗಳನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ತಾವು ವಾದಿಯರಿಗೆ ಮೋಸ ಮಾಡುವ ಉದ್ದೇಶದಿಂದ 10 ರಿಂದ 13ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳನ್ನು ವಾದಿಯರು ಖರೀದಿ ಮಾಡಲು ಎಲ್ಲಾ ಸಮಯದಲ್ಲಿಯೂ ತಯಾರಿದ್ದರೂ ಸಹ ಅವರಿಗೇ ಮೋಸ ಮಾಡಬೇಕೆಂಬ ಉದ್ದೇಶದಿಂದ ರಾಗ ಅವರು ಸಂಪರ್ಕಿಸಿಲ್ಲ ಎಂದು ಹೇಳಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು 10 ರಿಂದ 13ನೇ ಪ್ರತಿವಾದಿಯರಗೇ ದಾವಾ ಆಸ್ತಿಗಳನ್ನು ಮಾರಾಟ ಮಾಡಿದ ಕಾರಣ ವಾದಿಯರಿಗೆ ಯಾವದೇ ವಿಚಾರವನ್ನು ತಿಳಿಸದೇ ಅವರ ಮನವಿಗಳನ್ನು ನಿರಾಕರಿಸುತ್ತಾ ಬಂದಿರುತ್ತೀರಿ ಎಂದರೆ ಸಾಕ್ಷಿಯು ನಾವು ಯಾರಿಗೂ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ಈಗಲೂ ಸಹ ವಾದಿಯರು ಆಸ್ತಿಗಳನ್ನು ಖರೀದಿ ಮಾಡಲು ತಯಾರಿರುತ್ತಾರೆಂದರೆ ಸಾಕ್ಷಿಯು ನಮ್ಮ ಆಸ್ತಿ ನಾವು ಯಾವ ಕಾರಣಕ್ಕೆ ಕೊಡೋಣ ಎಂದು ನುಡಿಯುತ್ತಾರೆ. ತಾವು ಖರೀದಿ ಸಂಚಗಾರ ಪತ್ರದ ಪ್ರಕಾರ ವಾದಿಯರಿಗೆ ಮಾರಾಟ ಮಾಡುವದಾಗಿ ಒಪ್ಪಿಕೊಂಡಿದ್ದರೂ ಸಾಕ್ಷಿಯು ಮೃತ 1ನೇ ಪ್ರತಿವಾದಿಗೆ ಗೊತ್ತಿದ್ದು ನಮ್ಮ ಬಳಿ ಯಾವದೇ ಮಾತುಕತೆ ಆಗಿಲ್ಲ ಎಂದು ನುಡಿಯುತ್ತಾರೆ. ದಿ 23.07.2003 ರಂದು ಮೊದಲ

ಬಾರಿಗೆ ವಾದಿಯರಿಗೆ ತಾವು ಪ್ರತಿವಾದಿ 10 ರಿಂದ 13 ರವರಿಗೆ ಮಾರಾಟ ಮಾಡಿದ ವಿಚಾರ ಗೊತ್ತಾಗಿರುತ್ತದೆಂದರೆ ಸಾಕ್ಷಿಯು ನಾವು ಮಾರಾಟ ಮಾಡೇ ಇಲ್ಲ ಎಂದು ನುಡಿಯುತ್ತಾರೆ. ತಮಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಈಗ ವಾದಿಯರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲು ಃ 13 ನೇ ಪ್ರತಿವಾದಿಯರ ಪರ ವಕೀಲರಿಂದ ಃ**

ನಾನು ವಕಾಲತ್ತನ್ನು ಚೇತನ ರಟ್ಟಿಹಳ್ಳಿ ವಕೀಲರಿಗೆ ಕೊಟ್ಟಿರುತ್ತೇನೆ. ಇದೇ ವರ್ಷದಲ್ಲಿ ಅವರಿಗೆ ವಕಾಲತ್ತನ್ನು ಕೊಟ್ಟಿರುತ್ತೇನೆ. ನಮ್ಮ ಅಣ್ಣನವರ ಜೊತೆ ಚಿದಾನಂದ ರಟ್ಟಿಹಳ್ಳಿ ರವರ ಪರಿಚಯ ಇದ್ದು ಈಗ ಪ್ರಸ್ತುತ ವಕೀಲರ ಪರಿಚಯ ಇರುತ್ತದೆ. ನನ್ನ ಅಣ್ಣ ಹೇಳಿದ ರೀತಿ ನಾವು ಕೇಳುತ್ತಿದ್ದೆವು. ಎರಡೂ ದಾವಾ ಆಸ್ತಿಗಳು ಒಟ್ಟಾಗಿ ಸೇರಿಸಿದರೆ 6 ಎಕರೆ 10 ಗುಂಟೆ ಆಗುತ್ತದೆ. ಈ ವಿಸ್ತೀರ್ಣದ ಆಸ್ತಿಯನ್ನು ಈ ಹಿಂದೆ ವ್ಯವಸಾಯ ಮಾಡಿದ್ದು ಈ ವರ್ಷದಲ್ಲಿ ವ್ಯವಸಾಯ ಮಾಡಿಲ್ಲ. ನನಗೆ ಬಿ ಶೆಡ್ಯೂಲ ಆಸ್ತಿಯ  ವಿಸ್ತೀರ್ಣ ಎಷ್ಟು ಇರುತ್ತದೆಂಬದು ಸರ್ವೆ ನಂಬರ ಮೇಲೆ ಹೇಳಲು ಬರುವದಿಲ್ಲ. ಸರ್ವೆನಂಃ 623/4 ಸಿ/1 ರಲ್ಲಿನ 1 ಎಕರೆ 8 ಗುಂಟೆಯನ್ನು ಏರಪೋರ್ಟನವರು 2008 ರಲ್ಲಿ ಭೂಸ್ವಾದೀನ ಮಾಡಿಕೂಂಡಿರುತ್ತಾರೆಂದರೆ ಸರಿ. ಈ ರೀತಿ ಭೂಸ್ವಾದೀನವಾಗಿದ್ದರೂ ತಾವು ಜಮೀನನ್ನು ವ್ಯವಸಾಯ ಮಾಡುತ್ತಿದ್ದೀರಿ ಎಂದು ಹೇಳಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಲೂ ಸಹ ವ್ಯವಸಾಯ ಜಮೀನು ಆಗಿ ಇರುತ್ತವೆಂದು ತೋರಿಸಲು ಯಾವದೇ ದಾಖಲೆ ಹಾಜರುಪಡಿಸಿಲ್ಲ. 1 ನೇ ಪ್ರತಿವಾದಿಯ ಮಾತನ್ನು ತಾವು ಕೇಳುತ್ತಿದ್ದ ಕಾರಣ 1997 ರಲ್ಲಿ 1 ನೇ ಪ್ರತಿವಾದಿಯು ತಮ್ಮೆಲ್ಲರ ಸಹಿಗಳನ್ನು ಪಡೆದು ಚಿದಾನಂದ ರಟ್ಟಿಹಳ್ಳಿ ರವರಿಗೆ ಒಟ್ಟುಮೊಕ್ತಿಯಾರ ಪತ್ರವನ್ನು ಮಾಡಿಕೊಟ್ಟಿದ್ದರೇಂದರೆ ಸಾಕ್ಷಿಯು ಗೊತ್ತಿಲ್ಲ ಎನ್ನುತ್ತಾರೆ. ಆ ಒಟ್ಟುಮೊಕ್ತಿಯಾರ ಪತ್ರದ ಆದಾರದ ಮೇಲೆ ಚಿದಾನಂದ ರಟ್ಟಿಹಳ್ಳಿ ವಕೀಲರು 10 ರಿಂದ 13 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. ಸರ್ವೆ ನಂಃ 627/3 ರ ಒಟ್ಟು ವಿಸ್ತೀರ್ಣ ಎಷ್ಟು ಎಂದರೆ ಸಾಕ್ಷಿಯು 4 ಎಕರೆ 10 ಗುಂಟೆ ಎಂದು ನುಡಿಯುತ್ತಾರೆ. ತಾವು ಸದರಿ ಜಮೀನದಲ್ಲಿ 5 ಗುಂಟೆ ಮಾತ್ರ ಉಳಿಸಿಕೊಂಡು 4 ಎಕರೆ 5 ಗುಂಟೆಯನ್ನು ಮಾರಾಟ ಮಾಡಿರುತ್ತೀರಿ ಎಂದರೆ ಸಾಕ್ಷಿಯು 1 ನೇ ಪ್ರತಿವಾದಿಯು ಏನೆಲ್ಲಾ ವ್ಯವಹಾರ ಮಾಡಿರುತ್ತಾರೆ ಹಾಗೂ ಯಾರಿಗೆಲ್ಲಾ ಮಾರಾಟ ಮಾಡಿರುತ್ತಾರೆಂಬುದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 10 ರಿಂದ 13 ನೇ

ಪ್ರತಿವಾದಿಯರು ಖರೀದಿ ಮಾಡಿದ ನಂತರ 2000 ನೇ ಇಸಿವಾಯಲ್ಲಿ ಬಿನ್ ಶೇತಿಕ ಮಾಡಿಸಿರುತ್ತಾರೆಂದರೆ ಸಾಕ್ಷಿಯು ಏನು ಮಾಡಿಸಿಲ್ಲ ಎಂದು ಅದೇ ರೀತಿ ಇರುತ್ತದೆಂದು ನುಡಿಯುತ್ತಾರೆ. ಬಿನ್ ಶೇತ್ಕಿ ಆದ ನಂತರ ಪ್ಲಾಟುಗಳನ್ನು ಸಹ ಮಾಡಲಾಗಿರುತ್ತದೆಂದರೆ ಸಾಕ್ಷಿಯು ಯಾವದೇ ಪ್ಲಾಟುಗಳು ಆಗಿಲ್ಲ ಎನ್ನುತ್ತಾರೆ. ಸದರಿ ಪ್ಲಾಟುಗಳನ್ನು 10 ರಿಂದ 13 ನೆ ಪ್ರತಿವಾದಿಯರು ವಿಭಾಗ ಮಾಡಿಕೊಂಡಿರುವ ಬಗ್ಗೆ ಮಾಹಿತಿ ಇದೆಯಾ ಎಂದರೇ ಸಾಕ್ಷಿಯು ಮಾಹಿತಿ ಇಲ್ಲ ಎಂದು ಪ್ಲಾಟುಗಳು ಆಗಿಲ್ಲ ಎಂದು ನುಡಿಯುತ್ತಾರೆ. ಭೂಸ್ವಾದೀನವಾದ ಆಸ್ತಿಯ ಪರಿಹಾರವನ್ನು ಸಹ 10 ರಿಂದ 13 ನೇ ಪ್ರತಿವಾದಿಯರು ಪಡೆದಿದ್ದು ತಾವು ಪಡೆದಿಲ್ಲ ಎಂದರೆ ಸರಿ. 2000 ನೇ ಇಸ್ವಿಯಿಂದ ಇಲ್ಲಿಯವರೆಗೂ ಯಾವ ಅಸ್ತಿಗಳನ್ನು ಯಾರಿಗೂ ಮಾರಾಟ ಮಾಡಿಲ್ಲ ಎಂದು ಹೇಳಿ ಎಲ್ಲಿಯಾ ತಕರಾರನ್ನು ಮತ್ತು ಕೇಸನ್ನು ಮಾಡಿರುವದಿಲ್ಲ. ದಾವಾ ಆಸ್ತಿಗಳ ಉತಾರವನ್ನು ಇಲ್ಲಿಯವರೆಗೂ ನಾನು ತೆಗೆಸಿ ನೋಡುವ ಪ್ರಯತ್ನ ಮಾಡಿರುವದಿಲ್ಲ. ದಾವಾ ಆಸ್ತಿಗೆ ಸಂಬಂದಿಸಿದಂತೆ ಎನಾದರೂ ಕರವನ್ನು ತುಂಬಿದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿಯು 4 ನೇ ಪ್ರತಿವಾದಿಯು ತುಂಬಿರಬಹುದು ಆತನ ಬಳಿ ಕೇಳಿ ಹೇಳಬೇಕು ಎನ್ನುತ್ತಾರೆ. ಈ ಬಗ್ಗೆ ಯಾವದೇ ರೇಶಿಯನ್ನು ಮುಖ್ಯ ವಿಚಾರಣಾ ಪ್ರಮಾಣ ಪತ್ರದ ಜೊತೇ ಹಾಜರುಪಡಿಸಿಲ್ಲ ಎಂದರೆ ಸರಿ. ಸುಮಾರು 8 ವರ್ಷಗಳ ಹಿಂದೆ 1 ನೇ ಪ್ರತಿವಾದಿಯು ಮರಣ ಹೊಂದಿರುತ್ತಾರೆ. ಅವರ ಮರಣ ನಂತರ ನಾನು ಮತ್ತು 3 ರಿಂದ 6 ನೇ ಪ್ರತಿವಾದಿಯರು ಕೇಸನ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಮಾಡಲಿಲ್ಲ ಹಾಗೂ ನಮಗೆ ಕೇಸು ಇರುವದೇ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ಎ ಶೆಡ್ಯೂಲ ಆಸ್ತಿಯ 4 ಎಕರೆ 5 ಗುಂಟೆಯಲ್ಲಿ 10 ರಿಂದ 13 ನೇ ಪ್ರತಿವಾದಿಯರು ಸ್ವಾದೀನದಲ್ಲಿರುತ್ತಾರೆಂದರೆ ಸಾಕ್ಷಿಯು 4 ಎಕರೆ 10 ಗುಂಟೆಯೂ ಸಹ ನಮ್ಮ ಕಬಜಾದಲ್ಲಿರುತ್ತದೆಂದು ನುಡಿಯುತ್ತಾರೆ. ಕೇವಲ 5 ಗುಂಟೆ ಮಾತ್ರ ಎ ಶೆಡ್ಯೂಲ ಆಸ್ತಿಯಲ್ಲಿ ಕಬಜಾ ಇದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 2000 ನೇ ಇಸ್ವಿಯಲ್ಲಿ ಎ ಶೆಡೂಲ ಆಸ್ತಿಯು 10 ರಿಂದ 13 ನೇ ಪ್ರತಿವಾದಿಯರಿಗೆ ಖರೀದಿ ಆಗಿರಝುವ ವಿಚಾರ , 2003 ರ ಒಳಗೆ ಬಿನ್ ಶೇತ್ಕಿ ಯಾಗಿ ಪ್ಲಾಟುಗಳಾಗಿ ಪಾಲುದಾರಿಕೆಯಾದ ವಿಚಾರ ಗೊತ್ತಿದ್ದರೂ ಈಗ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಪ್ಲಾಟುಗಳಾಗಿಲ್ಲ ಮತ್ತು ಮಾರಾಟ ಮಾಡಿಲ್ಲ ಎಂದು ನುಡಿಯುತ್ತಾರೆ. ತಾವು ಯಾವದೇ ದಾಖಲೆ ಪರಿಶೀಲಿಸದೇ ದಾವಾ ಆಸ್ತಿಗಳು ವ್ಯವಸಾಯ ಜಮೀನುಗಳೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 10 ರಿಂದ 13 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗಳನ್ನು ಖರೀದಿ ಕೊಟ್ಟಿದ್ದರೂ ಈಗ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ತಾವು

ದಾವಾ ಆಸ್ತಿಗಳಲ್ಲಿ ಕಬಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂದಿಸಿದಂತೆ ತಮ್ಮ ಬಳಿ ಯಾವದೇ ಕರ ತುಂಬಿದ ದಾಖಲೆಗಳು ಇರುವದಿಲ್ಲ ಎಂದರೆ ಸಾಕ್ಷಿಯು ನೋಡಬೇಕೆಂದು ನುಡಿಯುತ್ತಾರೆ. 13 ನೇ ಪ್ರತಿವಾದಿಯು ತನ್ನ ಪಾಲಿಗೆ ಬಂದ ಆಸ್ತಿಯಲ್ಲಿ ಸಂಪೂರ್ಣ ಮಾಲೀಕತ್ವ ದಿಂದ ಸ್ವಾದೀನದಲ್ಲಿರುತ್ತಾರೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.